## ಐಫೋನ್ ಎಲ್ಲಿ ಹೋಯಿತು?

ಮರೆಗುಳಿಗಳಾ? ನಿಮ್ಮ ಐಫೋನ್, ಐಪ್ಯಾಡ್, ಐಪಾಡ್ ಅನ್ನು ಎಲ್ಲೋ ಇಟ್ಟು ಮರೆತುಬಿಟ್ಟಿದ್ದೀರಾ? ಚಿಂತೆ ಮಾಡುವ ಅಗತ್ಯವಿಲ್ಲ. ಇನ್ನೊಂದು ಐಒಎಸ್ ಉಪಕರಣದ ಮೂಲಕ 'ಫೈಂಡ್ ಮೈ ಐಫೋನ್' ಅಪ್ಲಿಕೇಶನ್ ಬಳಸಿ ನಿಮ್ಮ ಮಾಹಿತಿಯನ್ನೆಲ್ಲ ರಕ್ಷಿಸಿಟ್ಟುಕೊಳ್ಳಬಹುದು. ಉಚಿತವಾಗಿ ಲಭ್ಯ ಇರುವ ಈ ಅಪ್ಲಿಕೇಶನ್ ಅನ್ನು ಇನ್ನೊಂದು ಐಒಎಸ್ ಉಪಕರಣಕ್ಕೆ ಅಳವಡಿಸಿ. ಅದನ್ನು ತೆರೆದು ಒಪ್ಪಂದಕ್ಕೆ ಸಹಿ ಹಾಕಿ. ಅದು ನಿಮ್ಮ ಫೋನ್ ಇರುವ ಜಾಗವನ್ನು ಮ್ಯಾಪ್ ಮೇಲೆ ತೋರಿಸುತ್ತದೆ. ನಿಮ್ಮ ಫೋನ್ ಅನ್ನು ಲಾಕ್ ಮಾಡುತ್ತದೆ ಅಥವಾ ಎಲ್ಲಾ ಮಾಹಿತಿಯನ್ನು ಅಳಿಸಿ ಹಾಕಿ ಬೇರೆಯವರಿಗೆ ದೊರಕದಂತೆ ಮಾಡುತ್ತದೆ.




## ಸುದ್ದಿಗಾಗಿ ಡೇಲಿ ಬೀಸ್ಟ್

ವೆಬ್‌ನಲ್ಲಿ ಆಗಿಂದಾಗ್ಗೆ ಪರಿಷ್ಕೃತಗೊಳ್ಳುವ ಸುದ್ದಿಗಳನ್ನು ನಿಮ್ಮ ಫೋನ್‌ನಲ್ಲೂ ಪಡೆಯಬಹುದು. ಇದಕ್ಕೆಂದೇ ಡೇಲಿ ಬೀಸ್ಟ್ ಅಪ್ಲಿಕೇಶನ್ ಬಂದಿದೆ. ವೆಬ್‌ನಲ್ಲಿರುವ ಓದಲೇಬೇಕಾದ ಸುದ್ದಿಗಳು, ಅಭಿಪ್ರಾಯಗಳು, ಚಿತ್ರಗಳ ವಿವರಗಳನ್ನು ಇದು ನೀಡುತ್ತದೆ. 'ಚೀಟ್ ಶೀಟ್'ನಲ್ಲಿ ಅಂತರ್ ಜಾಲದಲ್ಲಿ ಲಭ್ಯ ಇರುವ ಅತ್ಯುತ್ತಮ ಸುದ್ದಿಗಳು ದೊರಕುತ್ತವೆ. ಜೊತೆಗೆ ರಾಜಕೀಯ ಸುದ್ದಿಯ ಮೂಲ, ಮನರಂಜನೆ, ಸಂಸ್ಕೃತಿ ಕುರಿತ ಲೇಖನಗಳೂ ಲಭ್ಯ. ಇಮೇಲ್, ಟ್ವಿಟ್ಟರ್ ಮತ್ತು ಫೇಸ್‌ಬುಕ್ ಮೂಲಕ ಇವುಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಬಹುದು.




## ಕಾನ್ಫರನ್ಸ್ ಕರೆ ಈಗ ಸುಲಭ

ಕಚೇರಿ ಕೆಲಸದ ಮೇಲೆ ಪ್ರವಾಸದಲ್ಲಿದ್ದರೂ ಕಚೇರಿಯ ಕೆಲಸದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು 'ಮೊಬೈಲ್‌ಡೇ' ಅಪ್ಲಿಕೇಶನ್ ಕಲ್ಪಿಸಿದೆ. ಆ್ಯಂಡ್ರಾಯ್ಡ್ ಫೋನ್ ಮೂಲಕ ಈ ಅಪ್ಲಿಕೇಶನ್‌ನಿಂದ ಕಾನ್ಫರನ್ಸ್ ಕರೆಗಳನ್ನು ಸ್ವೀಕರಿಸಬಹುದು. ಜೊತೆಗೆ ಆ್ಯಂಡ್ರಾಯ್ಡ್ ಕ್ಯಾಲೆಂಡರ್, ಇಮೇಲ್, ಸಂದೇಶಗಳು, ಮ್ಯಾಪ್ ಮತ್ತು ಅಡ್ರೆಸ್ ಬುಕ್ ಅಪ್ಲಿಕೇಶನ್‌ಗಳನ್ನು ನಿಮಗೆ ನೀಡುತ್ತದೆ.




## ಮೊಝಿಲ್ಲಾದಿಂದ ಬ್ರೌಸರ್

ಮೊಝಿಲ್ಲಾದ ಫೈರ್‌ಫಾಕ್ಸ್ ಬೀಟಾ ಅಪ್ಲಿಕೇಶನ್ ವಿಂಡೋಸ್, ಮ್ಯಾಕ್ ಮತ್ತು ಲಿನುಕ್ಸ್‌ನಲ್ಲಿ ಸೋಶಿಯಲ್ ಎಪಿಐ ಅನ್ನು ಬೆಂಬಲಿಸಲಿದೆ. ಸಾಮಾಜಿಕ ಜಾಲತಾಣ ಸವಲತ್ತುಗಳನ್ನು ನೇರವಾಗಿ ಬ್ರೌಸರ್‌ನಲ್ಲೇ ಪಡೆಯುವ ಅಪ್ಲಿಕೇಶನ್ ಇದು. ಹೊಸ ವೆಬ್ ಪೇಜ್ ಅಥವಾ ಟ್ಯಾಬ್‌ಗಳ ನಡುವೆ ಕಸರತ್ತು ಮಾಡುವ ಅಗತ್ಯವಿಲ್ಲದೇ ಬ್ರೌಸರ್‌ನಲ್ಲೇ ನಿಮ್ಮ ಸ್ನೇಹಿತರು, ಕುಟುಂಬ ಸದಸ್ಯರ ಜೊತೆ ಸಂಪರ್ಕ ಕಲ್ಪಿಸಲಿದೆ ಈ ಅಪ್ಲಿಕೇಶನ್. ಈಗಾಗಲೇ ಫ್ಲಾಕ್ ಮತ್ತು ರಾಕ್‌ಮೆಲ್ಟ್ ಬ್ರೌಸರ್‌ಗಳು ನೇರವಾಗಿ ಈ ಸೌಲಭ್ಯ ನೀಡಿವೆ. ಅಂದರೆ ಸಾಮಾಜಿಕ ಜಾಲತಾಣಗಳಿಗೆ ಸಂಬಂಧಿಸಿದಂತೆ ಬಿಲ್ಟ್ ಇನ್ ಸವಲತ್ತುಗಳು ಲಭ್ಯ.



■ ಎಸ್. ತುಂಬೆ